884

ಪಬ್ಲಿಕ್ ವರ್ಕ್ಸ್ ಇಲಾಖೆ ಹಣದ ಪೆಟ್ಟಿಗೆಗಳನ್ನು ಡಿಸ್ಟ್ರಿಕ್ಟ್ ವ ತಾಲ್ಲೂಕು ಖಜಾನೆಗಳಲ್ಲಿ ಹಿಫಾಜತು ಮಾಡುವಣ.

ಸರ್ಕ್ಯುಲರ್ ನಂಬರ್ 1604, ಮಕ್ತುಂ 28ನೇ ಅಕ್ಟೋಬರ್ 1884.

ಕಾಂಪ್ಟ್ರೋಲರ್ ಯವರು ಡಿಸ್ಟ್ರಿಕ್ಟ್ ವ ತಾಲ್ಲೂಕು ಟ್ರೆಜರೀ ಆಫೀಸರುಗಳಿಗೆ ತಿಳಿಸುವದೇನಂದರೆ, ಮೈಸೂರು ಗವರ್ಮೆಂಟಿನ ಸೆಕ್ರಿಟೇರಿಯವರ ಅಪೇಕ್ಷೆಮೇರೆ ಪಬ್ಲಿಕ್ ವರ್ಕ್ಸ್ ಇಲಾಖೆ ಆಫೀಸರುಗಳು ತಮ್ಮ ಸರ್ಕಾರದ ಹಣದ ಪೆಟ್ಟಿಗೆಗಳನ್ನು (ಬೀಗಹಾಕಿ ಮೊಹರ್ ಮಾಡಿ) ಹಿಫಾಜತಿಗೋಸ್ಕರ ಸ್ಥಳಿಕ ತಾಲ್ಲೂಕು ವ ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಮಿಡುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ. ಹೀಗೆ ಯಿಡಲ್ಪಟ್ಟಾಗ ಟ್ರೆಜರಿ ಇನ್‌ಚಾರ್ಜ್ ಆಫೀಸರು, ಇವರೀ ಕಂಡ ನಮೂನೆಯಲ್ಲಿ ಒಂದು ರೇತಿ ಕೊಡತಕ್ಕದ್ದು ; ಸದರೀ ರೇತಿಯು, ಹಣದ ಪೆಟ್ಟಿಗೆ ಪಬ್ಲಿಕ್ ವರ್ಕ್ಸ್ ಆಫೀಸರಿಂದ ಪುನಃ ತರಿಸಿಕೊಳ್ಳಲ್ಪಟ್ಟಾಗ, ವಾಪಸ್ ಮೂಡಲ್ಪಡತಕ್ಕದ್ದು.

ರಿಂದ ಹಿಫಾಜತಿಗೋಸ್ಕರ ಬೀಗಹಾಕಿ ಮೊಹರ್ಮಾಡಲ್ಪಟ್ಟು ಬಂದು ಪೆಟ್ಟಿಗೆಯು ಬಂದಿರುತ್ತೆ.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಅಂಬಕೆ ಇಲಾಖಾ.

ನಂ. 331—188. ತಾರೀಖು 10ನೇ ಅಕ್ಟೋಬರ್ 1884, ವೊಕ್ಕಾಂ ಸಾಲಿಗ್ರಾಮ.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೊಸಬಳಿ ಅಂಚೇ ಆಫೀಸುಗಳು ಸ್ಥಾಪಿಸಲ್ಪಟ್ಟಿರುತವೆ :—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಮುಳಬಾಗಲು	ಎಲದೂರು, ನಂಗಲಿ, ತಾಯಲೂರು.
ಕಾನಕಾನಹಳ್ಳಿ	ಸಾತನೂರು.
ಬವರಿಂಗ ಪೇಟೆ	ಸೂಲಿಕುಂಟೆ.
ತಿರುಮಕೂಡ್ಲು ನರಸೀಪುರ	ಪೂರೆಗಾಲ.
ನೆಲಮಂಗಲ	ಗೊಲ್ಲಹಳ್ಳಿ.

ಬಿ. ವಂಗಂಗಯ್ಯ,
ಅಂಚೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇನೇದಾರ ಗುಬ್ಬಿ ಸ್ಥಳದ ಸಂಜೀವಯ್ಯನ ವಿಷಯದಲ್ಲಿ.

ಸ್ರ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 42.

ಹುಕುಂ.

ಮೇಲ್ಕಂಡ ಸಂಜೀವಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರಪಿಸಿಕೊಂಡ ಅರ್ಜಿಯು ಸಬ ಜಡ್ಜ್ರರಾದ ಸಿ. ಜೈಸ್ ಸಾಹೇಬರವರ ರೂಬರೂ ಅರ್ಜೀದಾರನ ಪರವಾಗಿ ಸಮಕ್ಷನುದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 1ನೇ ಮದೋಡಪ್ಪನ ಕಡೆ